ಅಧ್ಯಕ್ಷರು :– ನಾನು ಈಗ ruling ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ನೀಡಿರುವ ವಿಷಯವು ಇತ್ತೀಚಿನ ವಿಷಯವಾಗಿರುವುದಿಲ್ಲ. ಈಗ ಸದನದ ಮುಂದೆ ಆಯವ್ಯಯದ ಮೇಲೆ ಚರ್ಚೆ ನಡೆಯುತ್ತಿದೆ. ವಿಷಯವು ನ್ಯಾಯಾಲಯದ ಮುಂದೆ ಇದೆಯೆಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನನ್ನ ಗಮನಕ್ಕೆ ತಂದಿರುತ್ತಾರೆ. ಆದರೂ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 63ರ proviso ಅಡಿಯಲ್ಲಿ ನ್ಯಾಯಾಲಯದ ಮುಂದೆ ಇದ್ದರೂ ಚರ್ಚೆಗೆ ಅವಕಾಶ ಬೇಕು, ಕೊಡಬಹುದು ಎನ್ನುವಂಥದ್ದನ್ನೂ ನನ್ನ ಗಮನಕ್ಕೆ ತಂದಿದ್ದಾರೆ. ಆದರೆ, ಇಲ್ಲಿ ಹೇಳಿರುವಂಥ ವಿಚಾರವು ನೇರವಾಗಿ ನ್ಯಾಯಾಲಯದಲ್ಲಿ ಪ್ರಶ್ನೆ ಇರುವಂಥ ವಿಚಾರವಾಗಿರುವುದರಿಂದ ಇದನ್ನು ಯಾವುದೇ ರೀತಿಯಲ್ಲಿ ಚರ್ಚೆ ಮಾಡಿದರೆ ನಿಯಮ 62 sub rule 7ರ ಪ್ರಕಾರ sub-judice ಆಗುತ್ತದೆಂದು ಭಾವಿಸಿ ಈ ನಿಲುವಳಿ ಸೂಚನೆಯ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. ಮಾನ್ಯ ಸದಸ್ಯರು ಇದನ್ನು ಬೇರೆ ಸೂಚನೆಯಡಿಯಲ್ಲಿ ಕೊಟ್ಟರೆ, ಚರ್ಚೆಗೆ ಅವಕಾಶ ಕೊಡುತ್ತೇನೆ. ಬೇರೆ ನಿಯಮದಡಿ ತಂದರೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ :– ಈ ರಾಜ್ಯದಲ್ಲಿ ಕೆಟ್ಟ ಸಂಪ್ರದಾಯ.

(ಗೊಂದಲ)

ಅಧ್ಯಕ್ಷರು : – ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಡಿ.ಕೆ.ಶಿವಕುಮಾರ್ : – ನೀವು ಹೇಳಿ.

(ಗೊಂದಲ)

ಅಧ್ಯಕ್ಷರು : – ಮತ್ತೆ ವಿಷಯ ಹೇಳಿಬಿಡುತ್ತೇನೆ. Kaul and Shakdher ರವರ ಪುಸ್ತಕದ page No.546 ರಲ್ಲಿ ಬಹಳ ಸ್ಪಷ್ಟವಾಗಿ ಬಜೆಟ್ ವಿಚಾರ ಚರ್ಚೆಯಾಗುವಾಗ ಬೇರೆಯದಕ್ಕೆ ಅವಕಾಶ ಕೊಡಬಾರದೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : – ಆಯಿತು. ಬೇರೆ ನಿಯಮದಲ್ಲಿ ತನ್ನಿ.

(ಗೊಂದಲ)